ಮತ್ತು ಒಳ್ಳೆಯ ಕಾಮಗಾರಿ ಕೆಲಸ ಮಾಡಿ ಎಲ್ಲರಿಗೂ ನೀರು ಸಿಗುವ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಅದಕ್ಕಿಂತ ಮುಖ್ಯವಾಗಿ ಪೊಣಂಕಾಪು. ಮೊಲ್ಲಮಜಲು, ಕಲ್ಲಗುಡ್ಡೆ, ಅಂದರಬೆಟ್ಟು, ಕಾಮಾಜೆ, ಮೈರನಪಾಡ, ಬೋಳಂಗಡಿ, ಬೊಂಡಾಲ, ಶಾಂತಿಗುಡ್ಡೆ, ಉಪ್ಪುಗುಡ್ಡೆ, ಬಂಗ್ಲೆಗುಡ್ಡೆ ಇತ್ಯಾದಿ ಪ್ರದೇಶಗಳಲ್ಲಿ ಕುಡಿಯಲು ನೀರಿಲ್ಲ. ಇಲ್ಲಿ ಕುಡಿಯುವ ನೀರಿನ ದೊಡ್ಡ ಸಮಸ್ಯೆ ಇದೆ. ಈ ಎಲ್ಲಾ ಪ್ರದೇಶಗಳಿಗೂ ಕೂಡ ಇದನ್ನು ವಿಸ್ತರಣೆ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಈ ನೋಟೀಸ್ ಈಗ ನನಗೆ ಬಂದಿದೆ. ಅದರ ವಿಚಾರವನ್ನು ತಿಳಿದುಕೊಂಡು, ಸನ್ಮಾನ್ಯ ಸದಸ್ಯರನ್ನೂ ಕರೆಸಿ ಎಂ.ಡಿಯವರ ಜೊತೆಯಲ್ಲಿ ಮಾತನಾಡಿ, ಇದರ ಬಗ್ಗೆ ಪರಿಹಾರವನ್ನು ಕಲ್ಪಿಸಿಕೊಡುತ್ತೇನೆ.

(ಎ) *ಮೈಸೂರು ನಗರದಲ್ಲಿ ಗೋಪಾಲಕೃಷ್ಣ ಎನ್ನುವರ ಮೇಲೆ ಸುಳ್ಳು ಎಸ್‌ಐಟಿ ದಾಖಲು.*

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಸನ್ಮಾನ್ಯ ಸಭಾಧ್ಯಕ್ಷರೇ, ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಮೈಸೂರು ನಗರದಲ್ಲಿ ಗೋಪಾಲಕೃಷ್ಣ ಎನ್ನುವವರು ಸಂಪೂರ್ಣ ಪ್ಲಾಂಟೇಷನ್ ಎನ್ನುವ ಒಂದು ಕಛೇರಿಯನ್ನು ತೆರೆದಿದ್ದಾರೆ. ಅವರಿಗೆ ಮಂಡಿಮೊಹಲ್ಲಾ ಸರ್ಕಲ್ ಇನ್ಸ್‌ಪೆಕ್ಟರ್ ಆದ ನಾಗರಾಜ್ ಎನ್ನುವವರು, ಬಲವಂತವಾಗಿ ನೀನು ಈ ಕಛೇರಿಯನ್ನು ಮುಚ್ಚಬೇಕು ಎಂದು ಒತ್ತಾಯ ತಂದರು. ಅದಕ್ಕೆ ಅವರು ಲೈಸನ್ಸ್ ಅನ್ನು ತೋರಿಸಿದ್ದಕ್ಕೆ ಅವರು, ನೀವು ಅಂಗಡಿ ಮುಚ್ಚಲಿಲ್ಲ ಎಂದರೆ ನಿನ್ನ ಮೇಲೆ ಕೊಲೆ ಕೇಸ್ ಹಾಕುತ್ತೇನೆ ಅಥವಾ ಗಂಧದ ಮರದ ತುಂಡನ್ನು ಇಟ್ಟು ಕಳ್ಳಸಾಗಾಣಿಕೆಯ ಕೇಸ್ ಹಾಕುತ್ತೇನೆ ಎಂದು ಹೆದರಿಸಿ, ಕೊನೆಗೆ ಎಸ್‌ಐಟಿ ಸುಳ್ಳು ಕೇಸನ್ನು ದಾಖಲು ಮಾಡಿ, ಅವರ ಮೇಲೆ, ಅವರ ಮೇಲೆ ಸುಳ್ಳು ಕೇಸನ್ನು ಹಾಕಿದ್ದಾರೆ. ಇದನ್ನು ನಾನು ಸನ್ಮಾನ್ಯ ಗೃಹ ಮಂತ್ರಿಗಳ ಮತ್ತು ಡಿ.ಜಿ.ಯವರ ಗಮನಕ್ಕೆ ತಂದಾಗ, ಅವರು ಬೆಂಗಳೂರಿನಿಂದ ಒಬ್ಬ ಐ.ಜಿಯವರನ್ನು ನೇಮಕ ಮಾಡಿ ವಿಚಾರಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆದ್ದರಿಂದ ಆ ವಿಚಾರಣೆ ಏನಾಯಿತು, ಏನು ಕ್ರಮ ಜರುಗಿಸಿದರು ಎನ್ನುವ ಬಗ್ಗೆ ಸರ್ಕಾರದವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ನಾನು ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಕೆಲವು ಸಂದರ್ಭಗಳಲ್ಲಿ, ಶೂನ್ಯವೇಳೆಯಲ್ಲಿ ಎತ್ತುವಂಥ ಪ್ರಸ್ತಾವಗಳನ್ನು ಆ ದಿವಸವೇ ಕೊಡುತ್ತಾರೆ. ಆಗ ಅದು ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಿರುವುದಿಲ್ಲ. ಒಂದು ದಿನದ ಮುಂಚೆ ನೋಟೀಸ್ ಕೊಟ್ಟರೆ, ಆಗ ಮಾಹಿತಿಯನ್ನು ತರಿಸಲು ಸಾಧ್ಯವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನನಗೆ ಇವತ್ತು ನೋಟೀಸ್ ಬಂದಿದೆ. ಆದ್ದರಿಂದ ನಾನು ಉತ್ತರ ಕೊಡುತ್ತೇನೆ ಎಂದು ಅವರೇ ಇಲ್ಲಿ ಬಂದು ಹೇಳಿ ಹೋಗಬಹುದಿತ್ತು. ಇಲ್ಲಿಗೆ ಬಂದು ಹಾಗೆ ಹೇಳುವುದಕ್ಕೆ ಏನಾದರೂ ತೊಂದರೆ ಇದೆಯೇ?

ಶ್ರೀ ಎಂಸಿ. ನಾಣಯ್ಯ :— ಬರಲು ತೊಂದರೆಯಿಲ್ಲ. ಅವರಿಗೆ ನೋಟೀಸ್ ಇದ್ದು, ಅವರು ಬಾರದಿದ್ದರೆ ಅದು ಒಂದು ರೀತಿಯಾಗುತ್ತದೆ. ಮೇಲ್ಮನೆಯಲ್ಲಿ ಈಗ ಪ್ರಶ್ನೋತ್ತರ ವೇಳೆಯಾಗಿರುವುದರಿಂದ ಅವರು ಅಲ್ಲಿಯೂ ಇರುವ ಸಾಧ್ಯತೆಯಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ವಿಶೇಷವಾದ ಕೆಲಸವಿದೆ ಎಂದು ಅನುಮತಿ ತೆಗೆದುಕೊಂಡು ಹೋಗಿದ್ದಾರೆ ಎಂದರೆ ಅದಕ್ಕೆ ಅಡ್ಡಿಯಿಲ್ಲ. ಆದರೆ ಹಾಜರಿದ್ದೂ ಇಲ್ಲಿಗೆ ಏಕೆ ಬರಬಾರದು?

ಶ್ರೀ ಕೆ.ಎಸ್. ಈಶ್ವರಪ್ಪ :— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಾರುತಿರಾವ್ ಪವಾರ್‌ರವರು ಹೇಳುತ್ತಿರುವುದೇನೆಂದರೆ, ಗೃಹಸಚಿವರಿಗೆ ಈ ವಿಷಯವನ್ನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಇದನ್ನು ಡಿ.ಜಿ.ಯವರ ಹತ್ತಿರವೂ ಕೂಡ ಪ್ರಸ್ತಾಪಿಸಿದ್ದೆ, ಆಲ್ಲೂ ಪರಿಹಾರ ಸಿಗಲಿಲ್ಲ, ಅದಕ್ಕೋಸ್ಕರ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಇಬ್ಬರಿಗೂ ವಿಷಯ ಗೊತ್ತು. ಈಗ ಗೃಹ ಮಂತ್ರಿಗಳು ಇದ್ದಿದ್ದರೆ ಅವರಿಗೆ ಉತ್ತರ ಸಿಗುತಿತ್ತು. ಇದನ್ನು ಮೊದಲೇ ತಿಳಿಸುವ ಅಗತ್ಯವಿಲ್ಲ. ವಿಷಯ ಮೊದಲೇ ಗೊತ್ತಿರಲಿಲ್ಲ ಎಂದರೆ ನೀವು ಹೇಳುವುದನ್ನು ಒಪ್ಪಬಹುದು.

ಶ್ರೀ ಎಂ.ಸಿ. ನಾಣಯ್ಯ :— ಈ ವಿಷಯವನ್ನು ಇವತ್ತು ಎತ್ತುತ್ತಾರೆ ಎನ್ನುವುದಾದರೂ ಅವರಿಗೆ ಗೊತ್ತಾಗಬೇಕಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ :— ಗೃಹ ಮಂತ್ರಿಗಳು ಸದನದಲ್ಲಿ ಹಾಜರಿರಬೇಕಾದದು ಅವರ ಕರ್ತವ್ಯವಲ್ಲವೇ?

ಶ್ರೀ ಎಂ.ಸಿ. ನಾಣಯ್ಯ :— ಅವರು ಮೇಲ್ಮನೆಗೆ ಹೋಗಿರಬಹುದು ಎಂದು ನಾನು ಹೇಳುತ್ತಿದ್ದೇನೆ. ಆದ್ದರಿಂದ, ಮಾನ್ಯ ಸಭಾಧ್ಯಕ್ಷರೆ, ನಾನು ನಿಮ್ಮಲ್ಲಿ ಒಂದನ್ನು ವಿನಂತಿ ಮಾಡುತ್ತೇನೆ, ಶೂನ್ಯವೇಳೆಯಲ್ಲಿ ಎತ್ತುವಂಥ ವಿಚಾರಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಚಿವರಿಗೆ ಒಂದಷ್ಟು ನೋಟೀಸನ್ನು ಕೊಟ್ಟರೆ, ಉತ್ತರಿಸಲು ಅವರಿಗೆ ಆರು ಗಂಟೆಗಳ ಸಮಯವಾದರೂ ಬೇಕೋ,ಬೇಡವೋ ಹೇಳಿ. ದಯವಿಟ್ಟು ಅವರಿಗೆ ಮೊದಲೇ ನೋಟೀಸು ತಲಪುವ ಹಾಗೆ ತಾವು ವ್ಯವಸ್ಥೆ ಮಾಡಿ.

ಅಧ್ಯಕ್ಷರು :— ನಾನು ಅದನ್ನು ಮಾಡುತ್ತೇನೆ. ತಾವು ನನಗೆ ಒಂದು ಉಪಕಾರ ಮಾಡಿ. ನಿಮ್ಮ ಸರ್ಕಾರದಲ್ಲಿ ಎಷ್ಟು ಜನ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಇದ್ದಾರೆ, ಯಾರ್ಯಾರಿಗೆ ಏನೇನು ಪೋರ್ಟ್‌ಫೋಲಿಯೋ ಹಂಚಿದ್ದೀರಿ ಕೌನ್ಸಿಲ್‌ಗೆ ಎಷ್ಟು ಜನರನ್ನು ಅಲೋಕೇಟ್ ಮಾಡಿದ್ದೀರಿ, ನಮಗೆ ಎಷ್ಟು ಜನರನ್ನು ಅಲೋಕೇಟ್ ಮಾಡಿದ್ದೀರಿ, ಲಿವ್ ಮೇಲೆ ಯಾರಿದ್ದಾರೆ, ಟೂರ್ ಮೇಲೆ ಯಾರಿದ್ದಾರೆ, ನನ್ನ ಅನುಮತಿ ತೆಗೆದುಕೊಂಡು ಯಾರು ಹೋಗಿದ್ದಾರೆ ಎನ್ನುವುದನ್ನು ನನಗೆ ತಿಳಿಸಿಬಿಟ್ಟರೆ ನನಗೆ ಸುಲಭವಾಗುತ್ತದೆ ಆಗ ನಾನು ನೋಟೀಸನ್ನು ಬೈಫರ್ಕೇಟ್ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :— ನಮ್ಮಲ್ಲಿ ಲೀವ್ ರಿಸರ್ವ್ ಇಲ್ಲ.

ಅಧ್ಯಕ್ಷರು :— ನಾನು ನಿನ್ನೆ ಒಬ್ಬ ಸದಸ್ಯರ ಹೆಸರನ್ನು ಹಿಡಿದು, ಇಷ್ಟು ದಿವಸ ಕಾಣಿಸಲಿಲ್ಲ, ಯಾವಾಗ ಬಂದಿರಿ ಎಂದು ಕೇಳಿದೆ. ರಾಮದಾಸ್‌ರವರು ಈ ಅಧಿವೇಶನದಲ್ಲಿ ಕಾಣಿಸಲಿಲ್ಲವಲ್ಲಾ ಎಂದು ಕೇಳಿದೆ. ಸದಸ್ಯರಿಗೆ ಮಾತ್ರ ನಾನು, ನೀವು ಕಾಣಿಸಲಿಲ್ಲ, ಎಲ್ಲಿಗೆ ಹೋಗಿದ್ದೀರಿ ಎಂದು ನಿಷ್ಠೂರವಾಗಿ ಹೇಳುತ್ತೇನೆ, ನಿಮ್ಮ ಮಂತ್ರಿಗಳಿಗೆ ಹೇಳುವ ಹಾಗಿಲ್ಲವೇ? ಏಕೆ ನಿಮಗೆ ಸಂಬಳ ಕೊಡುತ್ತೇವೆ.?

ಶ್ರೀ ಎಂ.ಸಿ. ನಾಣಯ್ಯ :— ಅಷ್ಟೇ ನಿಷ್ಠೂರದಿಂದ ತಾವು ನಮಗೂ ಹೇಳಬಹುದು, ಅದರಲ್ಲಿ ತಪ್ಪೇನೂ ಇಲ್ಲ.

ಅಧ್ಯಕ್ಷರು :— ಪವಾರ್‌ರವರೆ, ನಿಮಗೆ ಸಿಂಧ್ಯಾರವರು ಬಂದಾಗ ಉತ್ತರ ಕೊಡಿಸುತ್ತೇನೆ.

(ಏ) ಹುಬ್ಬಳ್ಳಿಯಲ್ಲಿರುವ ಕೆ.ಎಸ್.ಆರ್.ಟಿಸಿ ಮುದ್ರಣಾಲಯದ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾ) :— ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಮುದ್ರಣಾಲಯವು 1988ರಿಂದ ಇದೆ. ಅಲ್ಲಿಗೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹೊಸದಾಗಿ ಅಸ್ತಿತ್ವಕ್ಕೆ ಬಂದ ನಂತರ ಈ ಮುದ್ರಣಾಲಯವನ್ನು ಅಲ್ಲಿಗೆ ಸ್ಥಳಾಂತರ ಮಾಡಲಿಲ್ಲ. ಅಲ್ಲದೆ, ಈ ಮುದ್ರಣಾಲಯದಲ್ಲಿ ಪ್ರಿಂಟ್ ಮಾಡುತ್ತಿದ್ದಂಥ ವೇ ಬಿಲ್‌ಗಳನ್ನು ಮತ್ತು ಪುಷ್ಪಕ್ ಟಿಕೆಟ್‌ಗಳನ್ನು ಏಪ್ರಿಲ್ ಒಂದರಿಂದ ಬೆಂಗಳೂರಿನ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರಿಂಟ್ ಮಾಡಬೇಕು ಎಂದು ನಿರ್ಣಯ ತೆಗೆದುಕೊಂಡಿರುವುದು ಸಂದೇಹಕ್ಕೆ ಎಡೆ ಮಾಡಿಕೊಡುತ್ತದೆ. ಈ ಮುದ್ರಣಾಲಯವನ್ನು ಹಂತಹಂತವಾಗಿ ಮುಚ್ಚುವಂಥ ಒಂದು ಹುನ್ನಾರ ನಡೆದಿದೆ ಎಂದು ಕೇಳಿ ಬಂದಿದೆ. ಉತ್ತರ ಕರ್ನಾಟಕದ ಭಾಗಗಳಿಗೆ ಅನುಕೂಲವಾಗುವ ರೀತಿಯಲ್ಲಿ ಟಿಕೆಟ್‌ಗಳನ್ನು ಅಲ್ಲಿ ಪ್ರಿಂಟ್ ಮಾಡುವಂಥಾದ್ದು ನಡೆಯುತ್ತಿತ್ತು.ಆದರೆ ಅದನ್ನು ಅಲ್ಲಿ ಬಂದ್ ಮಾಡುವುದರಿಂದ,